

# ದಾಖಲೆ ವೀರ



ಶಿಕಾಗೊ ನಗರದಲ್ಲಿ ಮೂವತ್ತೈದರ ಯುವಕ ನಿಕ್ ವಾಲೆಂಡ್ ಬಹುಮಹಡಿ ಕಟ್ಟಡವನ್ನು ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಹಗ್ಗದ ಮೇಲೆ ನಡೆದು ಇದೀಗ ಗಿನ್ನೆಸ್ ದಾಖಲೆ ನಿರ್ಮಿಸಿದ್ದಾನೆ. ಈ ಸಾಹಸಿಗ ನವೆಂಬರ್ 2 ರಂದು ಸುಮಾರು 587 ಅಡಿ ಎತ್ತರದ ಮರೀನಾ ಸಿಟಿ ವೆಸ್ಟ್ ಟವರ್‌ನಿಂದ ಇನ್ನೊಂದು ಬದಿಯಲ್ಲಿರುವ ಬಹುಮಹಡಿ ಕಟ್ಟಡದವರೆಗೆ ಈ ಸಾಹಸ ಕ್ರಿಯೆ ನಡೆಸಿದ್ದು ಜಗತ್ತಿನಾದ್ಯಂತ ಸುದ್ದಿಯಾಯಿತು.

ಈತ ನಿರ್ಮಿಸಿದ ಈ ದಾಖಲೆ 9ನೇ ಬಾರಿಯದ್ದು ಎನ್ನುವುದು ಮತ್ತೊಂದು ವಿಶೇಷ. ಈ ಸಾಹಸವನ್ನು ಡಿಸ್ಕವರಿ ಚಾನೆಲ್ ಸೇರಿದಂತೆ ಹಲವಾರು ದೃಶ್ಯ ಮಾಧ್ಯಮಗಳು ಜಗತ್ತಿನಾದ್ಯಂತ ನೇರ ಪ್ರಸಾರ ಮಾಡಿದವು. ಅಂದು ಶಿಕಾಗೊ ನಗರದಲ್ಲಿ ಸುಮಾರು 40 ಡಿಗ್ರಿ ತಾಪಮಾನವಿದ್ದು, ಗಾಳಿ ಗಂಟೆಗೆ 10 ರಿಂದ 15 ಮೈಲಿ ವೇಗದಲ್ಲಿ ಬೀಸುತ್ತಿತ್ತು. ಈ ಸಾಹಸವನ್ನು ಅಲ್ಲಿ ನೆರೆದಿದ್ದ 60, 000 ಕ್ಕೂ ಹೆಚ್ಚು ಜನರು ಕಣ್ತುಂಬಿಕೊಂಡರು. ನಿಕ್ ವಾಲೆಂಡ್ ಅಮೆರಿಕಾದ ಖ್ಯಾತ ಫ್ಲೈಯಿಂಗ್ ವಾಲೆಂಡಾಸ್ ಸರ್ಕಸ್ ಕಂಪೆನಿಗೆ ಸೇರಿದವನಾಗಿದ್ದಾನೆ.

1979ನೇ ಜನವರಿ 24ರಂದು ಜನಿಸಿದ ಈತ ತನ್ನ 13ನೇ ವಯಸ್ಸಿನಲ್ಲೇ ತಂತಿ ಮೇಲೆ ನಡೆಯುವ ಸಾಹಸಕ್ಕೆ ಕೈ ಹಾಕಿದ. ಇವನಿಗೆ ತಾತ ಕಾರ್ಲ್ ವಾಲೆಂಡಾ ಅವರೇ ಸ್ಫೂರ್ತಿ. ಒಂದೇ ಒಂದು 'ಸೇಫ್ಟಿ ನೆಟ್' ಇಲ್ಲದೆ ಎತ್ತರದ ತಂತಿ ಮೇಲೆ ನಡೆಯುವ ಸಾಹಸಕ್ಕೆ ಪ್ರಸಿದ್ಧಿಯಾಗಿರುವ ವಾಲೆಂಡ್ 2005ರಿಂದ ವಿವಿಧ ಸ್ಥಳಗಳಲ್ಲಿ ತನ್ನ ಕುಟುಂಬದೊಡಗೂಡಿ ಹಲವಾರು ಸಾಹಸ ಪ್ರದರ್ಶನ ನೀಡಿದ್ದಾನೆ. 2008ರಲ್ಲಿ ನ್ಯೂಜರ್ಸಿಯಲ್ಲಿ ನೆಲ ದಿಂದ 135 ಅಡಿ ಎತ್ತರದಲ್ಲಿ ತಂತಿ ಮೇಲೆ ನಡೆದು ಗಿನ್ನೆಸ್ ದಾಖಲೆ ನಿರ್ಮಿಸಿದ್ದ ಈತ 2010 ರಲ್ಲಿ ಸುಮಾರು 250 ಅಡಿ ಎತ್ತರದ ಮೇಲಿನ ತಂತಿಯ ಮೇಲೆ ಬೈಸಿಕಲ್‌ನಲ್ಲಿ ಚಲಿಸಿ ದಾಖಲೆ ನಿರ್ಮಿಸಿದ್ದ. 2011ರಲ್ಲಿ ಪೋರ್ಟರಿಕೊ ನಗರದ ಪ್ಲಾಜಾ ಹೋಟೆಲ್ ಮೇಲಿನ ಎರಡು ಗೋಪುರಗಳ ನಡುವೆ ನಡೆದು ಗಿನ್ನಿಸ್ ದಾಖಲೆ ಮಾಡಿದ್ದ ನಿಕ್, 2012 ರ ಜೂನ್ 15 ರಂದು ವಿಶ್ವದ ಅದ್ಭುತಗಳಲ್ಲಿ ಒಂದಾದ ನಯಾಗರ ಫಾಲ್ಸ್ ಮೇಲೆ ಬಿಗಿಯಲಾದ ಹಗ್ಗದ ಮೇಲೆ ನಡೆದು ಹೊಸ ದಾಖಲೆ ಬರೆದಿದ್ದ.

ಇದೀಗ 2014ರ ಅದ್ಭುತ ಸಾಹಸ ಪ್ರದರ್ಶನ ನೀಡಿರುವ ನಿಕ್ ವಾಲೆಂಡ್, 'ಇದು ನನಗೆ ರೋಮಾಂಚನಕಾರಿ ಸವಾಲಾಗಿತ್ತು ಮತ್ತು ಇದು ಜನರಿಗೆ ಸಮಸ್ಯೆಗಳನ್ನು ಎದುರಿಸಲು ಸ್ಫೂರ್ತಿ ನೀಡುತ್ತದೆ' ಎಂದು ಹೇಳುತ್ತಾನೆ.

**■ ಹರೀಶ್ ಕುಮಾರ್, ಅಳವಂಡಿ**

